## ನಾನು ಕಂಡ ವಿವೇಕಾನಂದ



ಡಾ.ಆರ್. ಬಾಲಸುಬ್ರಹ್ಮಣ್ಯಂ

# ಸೇವೆಯ ಹಾದಿಯಲ್ಲಿ ಸತ್ಯದ ಅನ್ವೇಷಣೆ

ಸಾಮಾಜಿಕ ಸೇವಾ ಸಂಸ್ಥೆ ನಡೆಸುವಾಗ ನಿರಂತರವಾಗಿ ನಿಧಿ ಸಂಗ್ರಹ ಕಾರ್ಯವನ್ನೂ ಮಾಡಬೇಕಾದದ್ದು ಅತ್ಯಗತ್ಯ. ಎಲ್ಲಾ ರೀತಿಯ ಜನರನ್ನೂ ಸಂಪರ್ಕಿಸಿ, ಅವರಿಂದ ಸಹಕಾರ ಹಾಗೂ ಆರ್ಥಿಕ ನೆರವು ಕೋರಬೇಕಾಗುತ್ತದೆ. ಹೀಗೆ ಸಂಪರ್ಕಿಸಿದಾಗ ವ್ಯಕ್ತವಾಗುವ ಪ್ರತಿಕ್ರಿಯೆ ಕೂಡ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಕೆಲವರು ಪ್ರೋತ್ಸಾಹದ ಮಾತುಗಳನ್ನು ಆಡಿ ಉದಾರವಾಗಿ ಸಹಾಯ ಮಾಡುತ್ತಾರೆ. ಕೆಲವರು ವಿನಯವಾಗಿಯೇ ಬೇಡಿಕೆಯನ್ನು ತಳ್ಳಿಹಾಕುತ್ತಾರೆ. ಇನ್ನು ಕೆಲವರು ನಿಮ್ಮ ಬೇಡಿಕೆ ತಮಗೆ ಒಪ್ಪಿಗೆ ಆಗಲಿಲ್ಲವೆಂದು ಮುಖಕ್ಕೆ ಹೊಡೆದಂತೆ ತಿಳಿಸುತ್ತಾರೆ.

ಇನ್ನು ಕೆಲವರು ನಿಮ್ಮನ್ನು ಭಿಕ್ಷುಕರಂತೆ ಕಾಣುವುದರಿಂದ, ಆಗ ನಿಮ್ಮ ಬಗ್ಗೆ ನೀವೇ ಕೀಳಾಗಿ ಭಾವಿಸುವ ಸನ್ನಿವೇಶವೂ ಎದುರಾಗಬಹುದು. ಇಂತಹ ಸಂದರ್ಭದಲ್ಲಿ, ಸೇವಾ ಕಾರ್ಯವನ್ನು ತೊರೆಯುವ ಯೋಚನೆಯೂ ಮನಸ್ಸಿನಲ್ಲಿ ಮೂಡುತ್ತದೆ. ಇದರಿಂದ ಹತಾಶೆ ಹಾಗೂ ನಿರುತ್ಸಾಹವಾಗಿ ಸೇವಾ ಆದರ್ಶವನ್ನು ತ್ಯಜಿಸಬೇಕೆಂಬ ಅನಿಸಿಕೆಯೂ ಬೆಳೆಯತೊಡಗುತ್ತದೆ.

ಆಹಾರಕ್ಕಾಗಿ 'ಭಿಕ್ಷೆ' ಕೋರುವ ಆದರ್ಶವನ್ನು ಕಾರ್ಯರೂಪಕ್ಕಿಳಿಸುವ ಸವಾಲಿನ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರೂ ಇಂತಹುದೇ ಪರಿಸ್ಥಿತಿಗಳನ್ನು ಎದುರಿಸಿದ್ದರು. ಆಹಾರಕ್ಕಾಗಿ ಭಿಕ್ಷೆ ಬೇಡುತ್ತಾ ಊರಿನಿಂದ ಊರಿಗೆ ಅಲೆದಾಡುವುದರಿಂದ, ತಮ್ಮ ಆತ್ಮ ಸಾಕ್ಷಾತ್ಕಾರಕ್ಕೆ ಯಾವ ರೀತಿಯ ನೆರವೂ ಆಗದು ಎಂದು ಒಮ್ಮೆ ಅವರಿಗೆ ಅನ್ನಿಸಿತು. ಇಂತಹ ಬೇಸರದ ಮನಃಸ್ಥಿತಿಯಲ್ಲಿದ್ದಾಗ ಅವರೊಮ್ಮೆ ತಮ್ಮ ಸಹ ಶಿಷ್ಯರೊಬ್ಬರಿಗೆ ಪತ್ರ ಬರೆದು, "ನಾನು ಬೇರೆಯವರ ಬಳಿ ನಾಚಿಕೆಯಿಲ್ಲದೆ, ಕಾಗೆಯ ತರಹ ಆಹಾರಕ್ಕಾಗಿ ಭಿಕ್ಷೆ ಯಾಚಿಸುತ್ತಿದ್ದೇನೆ' ಎಂದು ಹೇಳಿದ್ದರು.

ಆ ಹಂತದಲ್ಲಿ, ಅವರು ಇನ್ನು ಮುಂದೆ ಭಿಕ್ಷೆ ಯಾಚಿಸದಿರುವ ನಿರ್ಧಾರವನ್ನೂ ತಳೆದಿದ್ದರು: "ನಾನು ಇನ್ನು ಮುಂದೆ ಭಿಕ್ಷೆ ಬೇಡಬಾರದು. ನನ್ನ ಹೊಟ್ಟೆ ತುಂಬಿಸುವುದರಿಂದ ಬಡ ಜನರಿಗೆ ಪ್ರಯೋಜನವಾದರೂ ಏನು? ಅವರು ನನಗೆ ಒಂದು ಮುಷ್ಟಿ ಅನ್ನ ನೀಡುವುದಾದರೆ, ಅದೇ ಅನ್ನವನ್ನು ಅವರು ತಮ್ಮ ಮಕ್ಕಳ ಹಸಿವು ನೀಗಿಸಲು ಬಳಸಬಹುದಲ್ಲವೇ? ಅದೇನೇ ಇರಲಿ, ನನಗೆ ದೈವದ ಸಾಕ್ಷಾತ್ಕಾರ ಮಾಡಿಕೊಳ್ಳಲು ಆಗುವುದಿಲ್ಲವೆಂದಾದರೆ ಈ ದೇಹವನ್ನು ಉಳಿಸಿಕೊಂಡು ಉಪಯೋಗವಾದರೂ ಏನು? ಎಂಬೆಲ್ಲಾ ಪ್ರಶ್ನೆಗಳು ಅವರಲ್ಲಿ ತಳಮಳಿಸಿದವು.

ಸತ್ಯದ ಮಹಾನ್ ಅನ್ವೇಷಕರಿಗೆ ತಮ್ಮ ಸಾಧನೆಯ ಹಾದಿಯಲ್ಲಿ ಅಧ್ಯಾತ್ಮದ ತೀವ್ರ ಅತೃಪ್ತಿಯೂ ಕಾಡುತ್ತದೆಯಂತೆ. ಸ್ವಾಮೀಜಿಗೂ ಹೀಗೆಯೇ ಆಗಿತ್ತು. ಒಮ್ಮೆ ತಮ್ಮ ಮನಸ್ಸನ್ನು ವೈರಾಗ್ಯ ಭಾವ ಆವರಿಸಿದಾಗ, ಪುರಾತನ ಕಾಲದ ಋಷಿಯಂತೆ ಕಾಡಿಗೆ ತೆರಳಿ ನಿರಾಹಾರಿಯಾಗಿ ದೇಹ ತ್ಯಾಗ ಮಾಡುವ ನಿರ್ಧಾರವನ್ನೂ ಅವರು ಮಾಡಿದ್ದರು. ದಟ್ಟ ಅರಣ್ಯ ಹೊಕ್ಕ ಅವರು, ಇಡೀ ದಿನ ಆಹಾರ ಸೇವಿಸದೆ ಮೈಲುಗಟ್ಟಲೆ ನಡೆದರು. ಸಂಜೆ ವೇಳೆಗೆ ಆಯಾಸದಿಂದ ಅವರಿಗೆ ತ್ರಾಣವೇ ಇಲ್ಲವಾಯಿತು. ಅಲ್ಲಿಯೇ ಮರವೊಂದರ ಕೆಳಗೆ ಮೈಚೆಲ್ಲಿದ ಅವರು, ತಮ್ಮ ಮನಸ್ಸನ್ನು ದೇವರಲ್ಲಿ ಕೇಂದ್ರೀಕರಿಸಿ, ಬಹುದೂರದವರೆಗೆ ಶೂನ್ಯದಲ್ಲಿ ಕಣ್ಣು ನೆಟ್ಟರು.

ಕೆಲ ಸಮಯದ ನಂತರ ಅಲ್ಲಿಗೆ ಹುಲಿಯೊಂದು ಧಾವಿಸಿತು. ನೋಡ ನೋಡುತ್ತಾ ಹತ್ತಿರಕ್ಕೆ ಬಂದ ಆ ಹುಲಿ ಅವರಿದ್ದ ಜಾಗದಿಂದ ಸ್ವಲ್ಪ ದೂರದಲ್ಲಿ ಕುಳಿತುಕೊಂಡಿತು. ಆಗ ಸ್ವಾಮೀಜಿ ಹೀಗೆ ಯೋಚಿಸಿದರು: "ಈಗ ನಮಗಿಬ್ಬರಿಗೂ ಹಸಿವಾಗಿದೆ. ಹೇಗಿದ್ದರೂ, ಈ ದೇಹವು ಆತ್ಮ ಸಾಕ್ಷಾತ್ಕಾರಕ್ಕೆ ಒಂದು ಸಾಧನವಾಗಿ ಪರಿಣಮಿಸಿಲ್ಲ. ಹೀಗಾಗಿ ಈ ದೇಹದಿಂದ ಜಗತ್ತಿಗೆ ಯಾವ ಒಳಿತನ್ನೂ ಮಾಡಲು ಆಗುವುದಿಲ್ಲ. ಹೀಗಿರುವಾಗ ಹಸಿವಿನಲ್ಲಿರುವ ಈ ಮೃಗಕ್ಕಾದರೂ ಆಹಾರವಾಗುವುದು ಅಪೇಕ್ಷಣೀಯವಲ್ಲವೇ" ಎಂದುಕೊಂಡರು.

ದೀರ್ಘ ಕಾಲ ಆ ಮರದಡಿಯೇ ಮೌನವಾಗಿ, ಅಲುಗಾಡದೆ, ಯಾವುದೇ ಕ್ಷಣದಲ್ಲಿ ಹುಲಿ ಮೇಲೆರಗಿ ತನ್ನನ್ನು ಆಹಾರವಾಗಿ ಸೇವಿಸಲಿ ಎಂದುಕೊಂಡು ಅವರು ಅಲ್ಲೇ ಕುಳಿತಿದ್ದರು. ಆದರೆ ಯಾಕೋ ಏನೋ ಸ್ವಲ್ಪ ಸಮಯದ ಬಳಿಕ ಹುಲಿ ತಂತಾನೇ ಆ ಜಾಗದಿಂದ ಬೇರೆ ಕಡೆಗೆ ಹೊರಟಿತು. ಹುಲಿ ವಾಪಸು ಬರಬಹುದೆಂದು ಸ್ವಾಮೀಜಿ ಅಲ್ಲೇ ಕಾಯ್ದರು. ಆದರೆ ಅದು ಪುನಃ ಬರಲಿಲ್ಲ. ಆ ರಾತ್ರಿಯನ್ನು ಅವರು ಅರಣ್ಯದಲ್ಲಿಯೇ ಆತ್ಮ ಸಂವಾದದಲ್ಲಿ ಕಳೆದರು.

ಅರುಣೋದಯವಾಗುತ್ತಿದ್ದಂತೆ ಸ್ವಾಮೀಜಿ ಅವರಲ್ಲಿ ಏನೋ ಶಕ್ತಿ ಸಂಚಯವಾದಂತಾಯಿತು. ತಮ್ಮ ಅಲೆಮಾರಿ ಬದುಕಿನಲ್ಲಿ ಅವರಿಗೆ ಇಂತಹ ಅನುಭವಗಳು ಹಲವಾರು ಸಾರಿ ಆಗಿದ್ದವು. ಬಳಿಕ ಕ್ಯಾಲಿಫೋರ್ನಿಯಾದಲ್ಲಿ ನೀಡಿದ ಉಪನ್ಯಾಸವೊಂದರಲ್ಲಿ ಸ್ವಾಮೀಜಿ ಹೀಗೆ ಹೇಳಿದ್ದರು: ಹಸಿವು, ಅಂಗಾಲು ಬಾವು ಇತ್ಯಾದಿಗಳಿಂದ ನಾನು ಹಲವು ಸಲ ಸಾವಿನ ದವಡೆಗೆ ಸಿಲುಕಿದ್ದೇನೆ. ದಿನಗಟ್ಟಲೆ ಆಹಾರ ಇರಲಿಲ್ಲ. ಒಂದು ಹೆಜ್ಜೆಯನ್ನೂ ಇಡಲು ಆಗದಷ್ಟು ಬಳಲಿಕೆ ಆಗಿರುತ್ತಿತ್ತು; ಮಾತನಾಡಲು ಕೂಡ ಆಗುತ್ತಿರಲಿಲ್ಲ; ಯೋಚಿಸಲೂ ಶಕ್ತಿ ಇರುತ್ತಿರಲಿಲ್ಲ. ಆದರೆ ಕಟ್ಟಕಡೆಗೆ ನನ್ನ ಮನಸ್ಸಿನಲ್ಲಿ ಹೀಗೊಂದು ಆಲೋಚನೆ ಹೊಳೆಯಿತು: "ನನಗೆ ಭಯವಾಗಲೀ, ಸಾವು ಎಂಬುದಾಗಲೀ ಇಲ್ಲ; ನಾನು ಹಿಂದೆ ಎಂದೂ ಜನ್ಮ ತಳೆದಿಲ್ಲ, ಮೃತನಾಗಿಯೂ ಇಲ್ಲ; ನನಗೆ ಹಸಿವೂ ಇಲ್ಲ, ಬಾಯಾರಿಕೆಯೂ ಇಲ್ಲ. ಅದೇ ನಾನು! ಅದೇ ನಾನು!... ಎದ್ದೇಳು, ನಡೆ, ನಿಲ್ಲಬೇಡ ಎಂದು ಮನಸ್ಸು ಹೇಳುತ್ತಿತ್ತು. ಆಗ ಪುನಃಶ್ಚೇತನಗೊಂಡು ಏಳುತ್ತಿದ್ದೆ; ಈಗ, ಇವತ್ತು, ನಿಮ್ಮ ಮುಂದೆ ಜೀವಂತವಾಗಿದ್ದೇನೆ!

ಇಂತಹ ಕತ್ತಲು ಆವರಿಸಿದ ವೇಳೆ, ವಾಸ್ತವಕ್ಕೆ ಬೆನ್ನು ತಿರುಗಿಸದಂತೆ ತಮ್ಮ ಶಿಷ್ಯರಿಗೆ ಹೇಳುತ್ತಿದ್ದ ಸ್ವಾಮೀಜಿ 'ಹತಾಶೆಯ ಪರಿಸ್ಥಿತಿ ಕನಸಿನಂತೆ ಕರಗಿ ಹೋಗುತ್ತದೆ' ಎಂದೇ ಪ್ರತಿಪಾದಿಸುತ್ತಿದ್ದರು. 'ಕಷ್ಟ ಕೋಟಲೆಗಳು ಪರ್ವತದೆತ್ತರದಂತೆ ಗೋಚರಿಸಿ, ಎಲ್ಲವೂ ಭಯಾನಕ ಹಾಗೂ ಕತ್ತಲಿನಂತೆ ಕಂಡರೂ, ಅವೆಲ್ಲವೂ ಮಾಯೆ. ಆದರೆ ಭಯ ಬೀಳದಿರಿ, ಅವೆಲ್ಲವೂ ಪಲಾಯನ ಮಾಡುತ್ತವೆ. ಅವನ್ನು ಪುಡಿಗಟ್ಟಿ, ಎಲ್ಲವೂ ಮಾಯವಾಗುತ್ತವೆ. ಮೆಟ್ಟಿ ನಿಲ್ಲಿ, ಅವೆಲ್ಲವೂ ಹಿಮ್ಮೆಟ್ಟುತ್ತವೆ'– ಹೀಗೆ ಸ್ವಾಮೀಜಿ ಉಲ್ಲೇಖಿಸಿದ್ದಾರೆ.